# ಅಯಾನ ಸಿನಿ ಕವನ

**ಭರತನಾಟ್ಯ ಕಲಾವಿದೆ ಅಯಾನ ಸಿನಿಮಾರಂಗಕ್ಕೆ ಪರಿಚಿತವಾಗಿದ್ದು ಗಿರೀಶ್ ಕಾಸರವಳ್ಳಿ ಅವರ 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' ಸಿನಿಮಾ ಮೂಲಕ. ರಂಗಭೂಮಿಯ ನಂಟನ್ನೂ ಹೊಂದಿರುವ ಅವರೀಗ 'X&Y' ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ತಮ್ಮ ಸಿನಿ ಪಯಣದ ಬಗ್ಗೆ ಅವರು ಮಾತನಾಡಿದ್ದಾರೆ.**

**■ ಸುಮಲತಾ ಎನ್.**



'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ', 'ದೂರದರ್ಶನ' ಕನ್ನಡ ಸಿನಿಮಾಗಳಲ್ಲಿ ಅಭಿನಯಿಸಿರುವ ನಟಿ ಅಯಾನ, ಇದೀಗ **'X&Y'** ಸಿನಿಮಾದಲ್ಲಿ ಹೊಸ ಛಾಟಿಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಡಿ. ಸತ್ಯಪ್ರಕಾಶ್ ನಿರ್ದೇಶನದ ಈ ಸಿನಿಮಾದಲ್ಲಿ ವಿಶೇಷ ಪಾತ್ರಕ್ಕೆ ಬಣ್ಣ ಹಚ್ಚಿದ್ದು, ಕಥೆಗೆ ಸ್ವಾರಸ್ಯ ತುಂಬಿರುವ ಈ ಪಾತ್ರ ಜನರ ಮೆಚ್ಚುಗೆಯನ್ನೂ ಗಳಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಅಯಾನ.

ಅಯಾನ ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ. ಭರತನಾಟ್ಯ ಕಲಾವಿದೆಯಾಗಿರುವ ಅವರಲ್ಲಿ ನಟಿಯಾಗಬೇಕೆಂಬ ಉದ್ದೇಶ ಇರದಿದ್ದರೂ ಬಂದ ಅವಕಾಶವನ್ನು ಕೈಚೆಲ್ಲುವ ಜಾಯಮಾನದವರಾಗಿರಲಿಲ್ಲ. ನಾಟ್ಯದೊಂದಿಗೆ ರಂಗಭೂಮಿಯಲ್ಲಿಯೂ ತೊಡಗಿಕೊಂಡಿದ್ದ ಅವರಿಗೆ ಆ ಅನುಭವಗಳು ಸಿನಿಮಾಗೆ ಅಗತ್ಯವಾದ ತಳಪಾಯವನ್ನೂ ರೂಪಿಸಿಕೊಟ್ಟಿದ್ದವು. ಆ ಸಮಯದಲ್ಲೇ ಅವರ ಮುಂದೆ ಬಂದದ್ದು 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' ಸಿನಿಮಾ ಅವಕಾಶ.

ಎಂ.ಎಸ್. ಸತ್ಯು ಅವರ ನಾಲ್ಕೈದು ನಾಟಕಗಳಲ್ಲಿ ಮುಖ್ಯ ಪಾತ್ರಧಾರಿಯಾಗಿ, ಎರಡು ವರ್ಷಗಳಲ್ಲಿ ಸುಮಾರು 30 ಶೋಗಳನ್ನು ನೀಡಿ ಸೈ ಎನಿಸಿಕೊಂಡಿದ್ದ ಅಯಾನ, ಗಿರೀಶ್ ಕಾಸರವಳ್ಳಿ ಅವರ ಈ ಸಿನಿಮಾವನ್ನು ತಮ್ಮ ಕರಿಯರ್‌ನ ಮೊದಲ ಹೆಜ್ಜೆಯಾಗಿಸಿಕೊಂಡರು. ಈ ಸಿನಿಮಾ ಬೆನ್ನಲ್ಲೇ 'ದೂರದರ್ಶನ' ಚಿತ್ರದ ಅವಕಾಶ ಹುಡುಕಿ ಬಂದಿತ್ತು. ಕಮರ್ಷಿಯಲ್ ಸಿನಿಮಾದಲ್ಲಿನ ಈ ನಟನೆ, ಚಂದನವನದಲ್ಲಿ ತಮ್ಮದೊಂದು ಗುರುತು ಮೂಡಿಸಲು ಅವರಿಗೆ ನೆರವಾಗಿ ಒದಗಿಬಂದಿತ್ತು.

'ನಟಿಯಾಗಬೇಕೆಂದು ಕನಸು ಕಂಡಿರದಿದ್ದರೂ ಅವಕಾಶಗಳು ಬಂದಾಗ ಏಕೆ ಪ್ರಯತ್ನಿಸಬಾರದೆಂಬ ಪ್ರಶ್ನೆ ಮೂಡಿತು. ಗಿರೀಶ್ ಕಾಸರವಳ್ಳಿ ಸರ್ ಅವರೊಂದಿಗೆ ಕೆಲಸ ಮಾಡಿದ ನಂತರ ನಾನು ಸಿನಿಮಾದಲ್ಲಿ ನಟಿಸಬಹುದೆಂಬ ವಿಶ್ವಾಸ ಹುಟ್ಟಿತು. ಬೇರೆ ಬೇರೆ ಪಾತ್ರಗಳಲ್ಲಿ ತೊಡಗಿಕೊಳ್ಳುವುದು, ಆ ಪಾತ್ರವೇ ನಾವಾಗುವುದು, ಪಾತ್ರದಲ್ಲಿ ಹೊಸತನ ತುಂಬುವುದು, ಒಟ್ಟಾರೆ ಸಿನಿಮಾ ಕಟ್ಟುವ ಪ್ರಕ್ರಿಯೆ ನನ್ನಲ್ಲಿ ಕುತೂಹಲ ತುಂಬಿತು' ಎಂದು ತಮ್ಮ ಹಿನ್ನೆಲೆ ತೆರೆದಿಟ್ಟರು ಅಯಾನ.

ಇದೀಗ 'ರಾಮಾ ರಾಮಾ ರೇ' ಸಿನಿಮಾ ಖ್ಯಾತಿಯ ಡಿ. ಸತ್ಯಪ್ರಕಾಶ್ ನಿರ್ಮಿಸಿ, ನಿರ್ದೇಶಿಸುತ್ತಿರುವ **'X&Y'** ಸಿನಿಮಾದಲ್ಲಿ ಅಯಾನ ನಟಿಸುತ್ತಿದ್ದು, ಕನ್ನಡದ ಮತ್ತೊಂದು ಸಿನಿಮಾದಲ್ಲಿಯೂ ತೊಡಗಿಕೊಂಡಿದ್ದಾರೆ. 'ಹೊಯ್ಸಳ' ಸಿನಿಮಾ ಖ್ಯಾತಿಯ ವಿಜಯ ನಾಗೇಂದ್ರ ಅವರ 'ಆಲ್ಫಾ' ಸಿನಿಮಾದಲ್ಲಿ ಅಭಿನಯಿಸುತ್ತಿದ್ದು, ತೆಲುಗು ಸಿನಿಮಾರಂಗಕ್ಕೂ ಕಾಲಿಟ್ಟಿದ್ದಾರೆ.

ಎಲ್ಲ ಆಯಾಮಗಳ ಪಾತ್ರಗಳನ್ನು ಅನ್ವೇಷಿಸುವ ಅಭಿಲಾಷೆಯ ಅಯಾನ ಅವರಿಗೆ ಸದ್ಯ ಪೌರಾಣಿಕ ಪಾತ್ರಗಳಲ್ಲಿ ತಮ್ಮನ್ನು ಕಂಡುಕೊಳ್ಳುವ ಹಂಬಲ. ■